

## ಆಕರ್ಷಕ ಬೆಳ್ಳಣಬೆ

ಸ್ಥಳೀಯವಾಗಿ ಬೆಳ್ಳಣಬೆ, ಮೊಟ್ಟೆ ಅಣಬೆ ಎಂದು ಕರೆಯುವ ಅಣಬೆಯ ಚಿತ್ರವಿದು. ಈ ಅಣಬೆ ಕಂಡು ಬಂದಿದ್ದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ನಮ್ಮ 'ಮಕರಂದ' ತೋಟದಲ್ಲಿ. ನೂರಾರು ಸಂಖ್ಯೆಯಲ್ಲಿ ನೆಲದಿಂದ ಮೂಡಿ ಬಂದಿರುವ ಈ ಅಣಬೆಗಳು ನೋಡಲು ಆಕರ್ಷಕ. ಹೆಚ್ಚಾಗಿ ಸತ್ತ ಮರದ ಬುಡದಲ್ಲಿ ಮೂಡುವ ಈ ಅಣಬೆ ಮುತ್ತು ಜೋಡಿಸಿದಂತೆ ಕಾಣುತ್ತದೆ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ






## ಬದುಕಿನ ವೈರುಧ್ಯ

ಜಗತ್ತು ನಾಗಲೋಟದಿಂದ ಓಡುತ್ತಿದೆ. ಹೊಸ ಹೊಸ ಪರಿಕರಗಳು ಜನರ ಜೀವನಶೈಲಿ ಮಾರ್ಪಡಿಸಿವೆ. ಆಧುನಿಕತೆಯ ಹೆಸರಿನಲ್ಲಿ ಪರಿಸರಕ್ಕೆ ಕೊಡಲಿ ಪೆಟ್ಟು ಬೀಳುತ್ತಿದೆ. ಪ್ರಸ್ತುತ ಜಗತ್ತು ಅಂತರ್ಜಾಲದಿಂದ ನಿಯಂತ್ರಿತ. ಅಪ್ಪ ಅಮ್ಮನ್ನನ್ನು ಬಿಟ್ಟು ಎಲ್ಲವೂ ಆನ್‌ಲೈನ್‌ನಲ್ಲಿ ಲಭ್ಯದಂತಿದೆ. ತಿಂಡಿಯಿಂದ ಹಿಡಿದು ಎಲೆಕ್ಟ್ರಾನಿಕ್ ಉಪಕರಣಗಳವರೆಗೆ ವಸ್ತುಗಳನ್ನು ಬೆರಳ ತುದಿಯನ್ನು ಮೊಬೈಲ್‌ನಲ್ಲಿ ಆಡಿಸುವ ಮೂಲಕ ತರಿಸಿಕೊಳ್ಳಬಹುದು. ಅಸಂಖ್ಯ ವಸ್ತುಗಳು ದಿನವೂ ವಿಲೇವಾರಿ ಆಗುತ್ತಿವೆ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡುವ ವಸ್ತುಗಳನ್ನು ಸರಿಯಾದ ವಿಳಾಸಕ್ಕೆ ತಲುಪಿಸಲು ಡೆಲಿವರಿ ಬಾಯ್ಸ್ ಇರುತ್ತಾರೆ. ತಮ್ಮ ದ್ವಿಚಕ್ರವಾಹನದಲ್ಲಿ ಕುಳಿತು ಬೆನ್ನಮೇಲೆ ದೊಡ್ಡದಾದ ವಸ್ತುಗಳಿಂದ ತುಂಬಿರುವ ಚೀಲ ಕಾಣುತ್ತದೆ. ಜೀವನೋಪಾಯಕ್ಕಾಗಿ ದೊಡ್ಡ ದೊಡ್ಡ ಚೀಲ ಹೊರುತ್ತಾ ರಸ್ತೆ ರಸ್ತೆಯಲ್ಲಿ ತಿರುಗುವ ಡೆಲಿವರಿ ಬಾಯ್ಸ್ ಕಾಣಸಿಗುತ್ತಾರೆ.

ಆನ್‌ಲೈನ್‌ನಲ್ಲಿ ಖರೀದಿಸಿದ ವಸ್ತುಗಳನ್ನು ಸುರಕ್ಷಿತವಾಗಿಡಲು ದೊಡ್ಡ ದೊಡ್ಡ ಡಬ್ಬಗಳು ಮತ್ತು ಥರ್ಮಾಕೋಲ್ ಬಾಕ್ಸ್‌ಗಳನ್ನು ಬಳಸಲಾಗುತ್ತದೆ. ಇವೆಲ್ಲಾ ನಂತರ ಕಸದ ಬುಟ್ಟಿಗೆ ಸೇರುತ್ತವೆ ಅಥವಾ ಬೀದಿಗೆ ಬೀಳುತ್ತವೆ. ಇಂತಹ ಕಸವನ್ನು ಹೆಕ್ಕಿ ತಮ್ಮ ಬೆನ್ನ ಮೇಲಿನ ದೊಡ್ಡ ಚೀಲಕ್ಕೆ ತುಂಬಿ, ಅದನ್ನು ಮಾರಿ ಜೀವಿಸುವ ಹೆಂಗಳೆಯರ ಗುಂಪೇ ಇದೇ. ಬೆಳ್ಳಂಬೆಳಿಗ್ಗೆ ಈ ಹೆಣ್ಣುಮಕ್ಕಳು ರಸ್ತೆಗಿಳಿದು ಅಲ್ಲಲ್ಲಿ ಬಿದ್ದ ಪ್ಲಾಸ್ಟಿಕ್ ಬಾಟಲಿಗಳು ಮತ್ತು ಇತರೆ ಮರು ಉಪಯೋಗವಾಗುವ ವಸ್ತುಗಳನ್ನು ಆಯುತ್ತಾ, ಬೀದಿ ಬೀದಿ ತಿರುಗುತ್ತಾ, ತಮ್ಮ ಬದುಕಿನ ಬಂಡಿಯನ್ನು ಎಳೆಯುತ್ತಾರೆ. ಒಂದೆಡೆ ಹೊಸ ವಸ್ತುಗಳನ್ನು ಹಂಚುತ್ತಾ ತಿರುಗುವ ಜೀವನವಾದರೆ, ಇನ್ನೊಂದೆಡೆ ಕಸದಿಂದ ಜೀವನ ನಡೆಸುವ ಜನರು ಒಂದೇ ಕ್ಯಾಮೆರಾ ಚೌಕಟ್ಟಿನಲ್ಲಿ ಸಿಕ್ಕಿದ್ದು ಬದುಕಿನ ವೈರುಧ್ಯವಲ್ಲವೇ? ಒಂದರಿಂದ ಪರಿಸರ ಮಾಲಿನ್ಯ, ಮತ್ತೊಂದರಿಂದ ಪರಿಸರ ಶುಚಿತ್ವ.

—ಎಸ್. ಶಿಶುಪಾಲ, ದಾವಣಗೆರೆ

## ನೀರಿನಲ್ಲಿ ಅರಳಿದ ಕರ್ನಾಟಕ

ಕನ್ನಡಪರ ಕಾರ್ಯಕ್ರಮಗಳು ನವೆಂಬರ್‌ನಲ್ಲಿ ಹೆಚ್ಚು ಪ್ರಾಧಾನ್ಯತೆ ಪಡೆಯುತ್ತವೆ. ಉಪನ್ಯಾಸ, ಪುಸ್ತಕ ಬಿಡುಗಡೆ, ಕವಿಗೋಷ್ಠಿ, ಕವನ ವಾಚನ, ಗಾಯನ ಸ್ಪರ್ಧೆ, ಪ್ರಶಸ್ತಿ ಸನ್ಮಾನ ಮತ್ತು ರಂಗಭೂಮಿ ಚಟುವಟಿಕೆಗಳು ಮಾಸ ಪೂರ್ತಿ ನಡೆದು ಕನ್ನಡಿಗರಲ್ಲಿ ಭಾಷಾ ಪ್ರೇಮ ಬೆಳೆಯುವಂತೆ ಮಾಡುತ್ತದೆ. ಈ ತಿಂಗಳು ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ, ಕನ್ನಡವೆ ಸತ್ಯ ಕನ್ನಡವೇ ನಿತ್ಯ, ಬಾರಿಸು ಕನ್ನಡ ಡಿಂಡಿಮವ ಮುಂತಾದ ಚೆನ್ನುಡಿಗಳು ಮುನ್ನೆಲೆಗೆ ಬರುತ್ತವೆ. ಸಾಹಿತ್ಯ ಕಾರ್ಯಕ್ರಮಗಳ ಪ್ರವೇಶ ದ್ವಾರದ ಮುಂದೆ ಉತ್ಸಾಹಿ ಮಹಿಳೆಯರು ಚಂದ ಚಂದದ ರಂಗೋಲಿ ಹಾಕಿ ಪ್ರೇಕ್ಷಕರನ್ನು ಆಕರ್ಷಿಸುವುದು ಸಾಮಾನ್ಯವಾಗಿದೆ. ಉಡುಪಿಯಲ್ಲಿ ಇಂಥ ಕಾರ್ಯಕ್ರಮದ ಸಭಾಂಗಣದ ಮುಂಬದಿಯಲ್ಲೂ ರಂಗೋಲಿಯೊಂದು ಗಮನ ಸೆಳೆಯಿತು. ನೀರಿನ ಬಟ್ಟಲಲ್ಲಿ ಬಣ್ಣದ ಪುಡಿ ಉದುರಿಸಿ ಕರ್ನಾಟಕವನ್ನು ಅರಳಿಸಿದ್ದು ಅದರ ವಿಶೇಷ. ವಿದ್ಯಾ ಮತ್ತು ವಿಶ್ವೇಶ ದಂಪತಿ ಇದನ್ನು ಇದೇ ಮೊದಲ ಬಾರಿಗೆ ರಚಿಸಿದ್ದು, ಆಕರ್ಷಕವಾಗಿತ್ತು.

—ಜೀವನ್ ಶೆಟ್ಟಿ, ಉಡುಪಿ

